ಅನ್ವಯಿಸುವುದಿಲ್ಲ

ಇ ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್‌ಗಳು ಪರಿಸರದ ಮೇಲೆ ಬಹಳಷ್ಟು ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ ತೆಗೆದುಕೊಂಡಿರುವ ಕ್ರಮಗಳೇನು;

ಇಲ್ಲ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (129)251
2. ಸದಸ್ಯರ ಹೆಸರು : ಶ್ರೀ. ಆರ್. ರೋಷನ್ ಬೇಗ್, ಶಿವಾಜಿನಗರ.
3. ಉತ್ತರಿಸುವ ಸಚಿವರು : (ಶ್ರೀ.ಜೆ.ಕೃಷ್ಣಪಾಲೀಮಾರ್)
: ಮಾನ್ಯ ಪರಿಸರ, ಜೀವಿಶಾಸ್ತ್ರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಅ) ಬೆಂಗಳೂರು ನಗರದಲ್ಲಿರುವ ಕೆರೆಗಳು ಮಾಲಿನ್ಯವಾಗುತ್ತಿರುವ (Polluted) ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ.

ಹೌದು

ಆ) ಕೆರೆಗಳ ಸುತ್ತಮುತ್ತಲಿನಲ್ಲಿರುವ ಅಪಾರ್ಟ್‌ಮೆಂಟ್‌ಗಳಿಂದ ಹಾಗೂ ಅಲ್ಲಿ ಕಟ್ಟಡಗಳು ತಲೆಯೆತ್ತುತ್ತಿರುವುದರಿಂದ ಕೆರೆಗಳು ಮಾಲಿನ್ಯವಾಗುತ್ತಿರುವುದರ ಬಗ್ಗೆ ಸರ್ಕಾರದ ಮುಂದಿರುವ ಕ್ರಮವೇನು (ವಿವರ ನೀಡುವುದು).

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆ.ಎಸ್.ಪಿ.ಸಿ.ಬಿ) ಕಟ್ಟಡ ಕಾಮಗಾರಿ ಯೋಜನೆಗಳಿಗೆ ಸಮ್ಮತಿ ನೀಡುವ ಮುನ್ನ ಬಿ.ಡಿ.ಎ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ಅಭಿಪ್ರಾಯವನ್ನು ಪಡೆಯುವುದರ ಜೊತೆಗೆ ಕೆಳಕಂಡಂತೆ ಮಾರ್ಗಸೂಚಿಯನ್ನು ಅನುಸರಿಸಿ ನಿರ್ಮಾಣ ಕಾಮಗಾರಿಗಳಿಗೆ ಸಮ್ಮತಿ ಪತ್ರ ನೀಡುತ್ತದೆ.
ಒಳಚರಂಡಿ ವ್ಯವಸ್ಥೆ ಇದ್ದಲ್ಲಿ ಕಟ್ಟಡಗಳ ಕೊಳಚೆ ನೀರನ್ನು ಅದಕ್ಕೆ ಬಿಡಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಮತಿಯಂತೆ ಅನುಮತಿಸಲಾಗುತ್ತಿದೆ. ಇಲ್ಲದ ಪಕ್ಷದಲ್ಲಿ ಕಟ್ಟಡಕ್ಕೆ ಪ್ರತ್ಯೇಕ ಶುದ್ಧೀಕರಣ ಘಟಕ ಅಳವಡಿಸಿ ಶುದ್ಧೀಕರಿಸಿದ ಕೊಳಚೆ ನೀರನ್ನು ಪುನರ್ ಬಳಸುವಂತೆ ಕಡ್ಡಾಯಮಾಡಲಾಗಿದೆ.

ಕಟ್ಟಡಗಳಿಂದ ನೇರವಾಗಿ ಕೆರೆಗಳಿಗೆ ಕೊಳಚೆ ನೀರು ಸೇರುತ್ತಿದ್ದರೆ ಅಂತಹ ಕಟ್ಟಡ ಮಾಲೀಕರ ವಿರುದ್ಧ ಜಲ (ಮಾಲಿನ್ಯ ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ, 1974ರ ಅಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗುತ್ತದೆ.

ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರವು ಪರಿಸರ ಆಘಾತ ಅಂದಾಜೀಕರಣ ಅಧಿಸೂಚನೆ 2006ರ ರೀತ್ಯಾ ಪರಿಸರ ವಿಮೋಚನಾ ಪತ್ರ ನೀಡುವಾಗ 20,000 ಚ.ಮೀ ಗಿಂತ ಹೆಚ್ಚು ನಿರ್ಮಿತ ಪ್ರದೇಶವುಳ್ಳ ನಿರ್ಮಾಣ ಯೋಜನೆಗಳಲ್ಲಿ ಪ್ರತ್ಯೇಕ ಕೊಳಚೆ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸುವಂತೆ ಯೋಜನಾ ಪ್ರವರ್ತಕರಿಗೆ ತಿಳಿಸುತ್ತದೆ. ಇದಲ್ಲದೆ ಕೆಳಕಂಡ ಷರತ್ತುಗಳನ್ನು ವಿಧಿಸಲಾಗುತ್ತದೆ.

1. ಬಿಟುಮಿನಸ್ ವಸ್ತುಗಳು ಹಾಗೂ ಅಪಾಯಕಾರಿ ಸಾಮಗ್ರಿಗಳನ್ನು ಸೇರಿದಂತೆ ನಿರ್ಮಾಣ ತ್ಯಾಜ್ಯಗಳು ಜಲ ಮಾರ್ಗಗಳು ಮತ್ತು ಶೇಖರಣಾ ಸ್ಥಳಗಳು ಕಲುಷಿತಗೊಳ್ಳುವುದಕ್ಕೆ ಅವಕಾಶ ನೀಡಬಾರದು ಮತ್ತು ಅಂತಹ ವಸ್ತುಗಳಿಂದ ಅಂತರ್ಜಲಕ್ಕೆ ಸೋರಿಕೆಯಾಗದಂತೆ ಸಂಗ್ರಹಿಸಬೇಕು.
2. ಉತ್ಪಾದನೆಗೊಳ್ಳುವ ಘನ ತ್ಯಾಜ್ಯಗಳನ್ನು ಸೂಕ್ತವಾಗಿ ಸಂಗ್ರಹಿಸಿ ವಿಲೇವಾರಿಗಾಗಿ
   ಪೌರ ಪ್ರಾಧಿಕಾರಗಳಿಗೆ ನೀಡುವ ಮುನ್ನ ಬೇರ್ಪಡಿಸತಕ್ಕದ್ದು.
3. ತ್ಯಾಜ್ಯ ನೀರನ್ನು ಯಾವುದೇ ಜಲ ಮೂಲಗಳಿಗೆ ಅಥವಾ ಹಳ್ಳ ಕೊಳ್ಳಗಳಿಗೆ ಬಿಡತಕ್ಕದ್ದಲ್ಲ.

ಕೊಳಚೆ ನೀರನ್ನು ಕೊಳವೆಗಳಿಗೆ ಹಾಯಿಸಲು ಬೆಂಗಳೂರು ನಗರ ಪ್ರದೇಶದಲ್ಲಿ ಪರಿಸರ ಕ್ರಿಯಾ ಯೋಜನೆಯಡಿಯಲ್ಲಿ (ಇ.ಎ.ಪಿ) ಪ್ರಮುಖ ಪ್ರದೇಶಗಳಲ್ಲಿ ಹಳೆಯ ಒಳಚರಂಡಿ ಕೊಳವೆ ಮಾರ್ಗಗಳನ್ನು ಉನ್ನತ ವ್ಯಾಸದ ಕೊಳವೆಗಳಿಂದ ಬದಲಾಯಿಸಲು ಬೆಂಗಳೂರು ಜಲಮಂಡಳಿಯು ಒಂದು ವಿಶೇಷವಾದ ಯೋಜನೆಯನ್ನು ಕೈಗೊಂಡಿದೆ. ಈ ಯೋಜನೆಯಡಿ ಹೆಚ್ಚುವರಿ ವ್ಯಾಸದ ಒಳಚರಂಡಿ ಕೊಳವನ್ನು ಒಳಚರಂಡಿಯಿಲ್ಲದ ಪ್ರದೇಶಗಳಿಗೂ ಕೆಳಕಂಡಂತೆ ವಿಸ್ತರಿಸಲಾಗಿದೆ.

ಪರಿಸರ ಕಾರ್ಯ ಯೋಜನೆ (ಇ.ಎ.ಪಿ)– ಎ ಅಡಿಯಲ್ಲಿ 450 ಎಂ.ಎಂ ರಿಂದ 1800 ಎಂ.ಎಂ. ಗಾತ್ರದ 35 ಕಿ.ಮೀ ಉದ್ದದ ಮುಖ್ಯ ಒಳಚರಂಡಿ ಮಾರ್ಗವನ್ನು ಪುನರ್ ನಿರ್ಮಾಣಗೊಳಿಸಲು 46.27 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಂಡಿದೆ. ಈಗಾಗಲೇ 31 ಕಿ.ಮೀ ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ಪರಿಸರ ಕಾರ್ಯ ಯೋಜನೆ (ಇ.ಎ.ಪಿ) – ಬಿ ಅಡಿಯಲ್ಲಿ 51.60 ಕಿ.ಮೀ ಉದ್ದದ ಒಳಚರಂಡಿ ಕೊಳವೆ ಮಾರ್ಗವನ್ನು ಪುನರ್ ನಿರ್ಮಾಣ ಮಾಡಲು ಹಾಗೂ 26 ಕಿ.ಮೀ ಉದ್ದದ ಮಾರ್ಗವನ್ನು ಹೊಸ ಕೊಳವೆಗಳೊಂದಿಗೆ ಬದಲಾಯಿಸುವ ಯೋಜನೆಯನ್ನು 176.00 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ರೂಪಿಸಲಾಗಿದೆ. ಈ ವೆಚ್ಚವನ್ನು ಜಪಾನ್ ಬ್ಯಾಂಕ್ ಫಾರ್ ಇಂಟರ್‌ನ್ಯಾಷನಲ್ ಕೋ–ಆಪರೇಷನ್ (ಜೆ.ಬಿ.ಐ.ಡಿ) ಮತ್ತು ಜವಹರ್‌ಲಾಲ್ ನೆಹರು ನ್ಯಾಷನಲ್

ಅರ್ಬನ್ ರಿನಿವಲ್ ಮಿಷನ್ (ಜೆ.ಎನ್.ಎನ್.ಯು.ಆರ್.ಎಮ್). ಹಣಕಾಸು ಸಹಯೋಗದೊಂದಿಗೆ ಕೈಗೊತ್ತಿಕೊಂಡಿದ್ದು ಈಗಾಗಲೇ 18.32 ಕಿ.ಮೀ ಉದ್ದದ ಕೊಳವೆ ಮಾರ್ಗ ಅಳವಡಿಸಲು ಟೆಂಡರ್ ಕರೆಯಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಉತ್ಪಾದನೆಗೊಂಡ ಪೌರ ಘನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಪೌರ ಘನ ತ್ಯಾಜ್ಯ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಗಳ ರೀತ್ಯಾ ವಿಲೇವಾರಿ ಮಾಡುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (130)252
ಸದಸ್ಯರ ಹೆಸರು : ಶ್ರೀ.ರೋಷನ್ ಬೇಗ್.ಆರ್
ಉತ್ತರಿಸುವ ಸಚಿವರು : (ಶ್ರೀ.ಆರ್.ಅಶೋಕ್)
: ಮಾನ್ಯ ಸಾರಿಗೆ ಸಚಿವರು

ಅ) ಬೆಂಗಳೂರು ನಗರದಲ್ಲಿರುವ ಆಟೋ ರಿಕ್ಷಾಗಳ ಸಂಖ್ಯೆ ಎಷ್ಟು?
75,247

ಆ) ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿ ಸುಮಾರು 5000 ಆಟೋರಿಕ್ಷಾಗಳಿಗೆ ಪರ್ಮಿಟ್ ನೀಡುವ ಯೋಜನೆ ಯೇನಾದರೂ ಸರ್ಕಾರದ ಮುಂದಿದೆಯೇ?

ರಾಜ್ಯ ಸರ್ಕಾರವು ದಿ: 25–3–2008 ರಂದು ಆದೇಶ ಹೊರಡಿಸಿ 5000 ಆಟೋರಿಕ್ಷಾ ರಹದಾರಿಗಳನ್ನು ಮಂಜೂರು ಮಾಡಿರುತ್ತದೆ.

ಈ ರಹದಾರಿಗಳ ಮಂಜೂರಾತಿಗೆ ಬೆಂಗಳೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ಅರ್ಜಿಗಳನ್ನು ಸ್ವೀಕರಿಸುತ್ತಿದ್ದು, ಮಂಜೂರಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (179)253
ಮಾನ್ಯ ಸದಸ್ಯರ ಹೆಸರು : ಶ್ರೀ ಸಂಪಂಗಿ .ಎನ್ ಬಾಗೇಪಲ್ಲಿ)
ಉತ್ತರಿಸುವ ಸಚಿವರು : ಶ್ರೀ.ಸಿ.ಎಂ.ಉದಾಸಿ)
: ಲೋಕೋಪಯೋಗಿ ಸಚಿವರು

ಅ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕಲುಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ವಿಸ್ತೀರ್ಣವೆಷ್ಟು ಹಾಗೂ ಸೇತುವೆಗಳ ಸಂಖ್ಯೆ ಎಷ್ಟು, ಶಿಥಿಲಾವಸ್ಥೆಯಲ್ಲಿರುವ ಈ ರಸ್ತೆಗಳು ಹಾಗೂ ಸೇತುವೆಗಳಿಂದ ಜನತೆಗೆ ಹಾಗೂ ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಚಿಕ್ಕಬಳ್ಳಾಪುರ ಜಿಲ್ಲೆಯ, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಶಿಥಿಲಗೊಂಡಿರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ವಿವರ ಕೆಳಗಿನಂತಿದೆ.